ಅ) ಇಲ್ಲದಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಘಟ್ಟದ ಮೇಲಿನ ಸಿರಸಿ ಮತ್ತು ಮುಂಡಗೋಡ ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಪ್ರಾಂಟೇಷನ್ ಬೆಳೆಗಳು ಅರಣ್ಯ ಕೃಷಿ ಮತ್ತು ಭತ್ತದ ಬೆಳೆಗಳ ಮೇಲೆ ಸಂಶೋಧನೆಯನ್ನು ಹಾಗೂ ಘಟ್ಟದ ಕೆಳಗಿನ ಕೃಷಿ ಸಂಶೋಧನಾ ಕೇಂದ್ರವಾದ ಅಂಕೋಲಾದಲ್ಲಿ ಮೀನು, ಸಿಗದಿ ಮೀನು ಮತ್ತು ನೆಲಗಡಲೆ ಮೇಲೆ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಕಡಿಮೆ ಮಳೆ ಬಿದ್ದಿರುವ ತಾಲ್ಲೂಕುಗಳ ಬಗ್ಗೆ

44- ಶ್ರೀ ಜಿ. ಬಸವೆಣ್ಣಪ್ಪ (ಹೊಳಿಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಸಾಲಿನಲ್ಲಿ ರಾಜ್ಯದಲ್ಲಿ ಸರಾಸರಿಗಿಂತ ಕಡಿಮೆ ಮಳೆ ಬಿದ್ದಿರುವ ತಾಲ್ಲೂಕುಗಳೆಷ್ಟು? (ತಾಲ್ಲೂಕಿನ ಹೆಸರು ಮತ್ತು ಮಳೆಯ ಪ್ರಮಾಣವನ್ನು ಒದಗಿಸುವುದು)

ಆ) ಸರಾಸರಿಗಿಂತ ಮಳೆ ಕಡಿಮೆಯಾಗಿರುವ, ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಘೋಷಿಸಲ್ಪಟ್ಟಿರುವ ತಾಲ್ಲೂಕುಗಳಾವುವು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) 19ನೇ ಆಗಸ್ಟ್, 1995ಕ್ಕೆ 70 ತಾಲ್ಲೂಕುಗಳು. (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ರಾಜ್ಯದ ಕೃಷಿ ಮಾರುಕಟ್ಟೆಗಳು ಮತ್ತು ಅವುಗಳ ವಿಸ್ತೀರ್ಣ?

691- ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಕೃಷಿ ಹುಟ್ಟುವಳಿಗಳ ಮಾರಾಟ ಮಾಡುವ ಮಾರ್ಕೆಟಗಳ ಸಂಖ್ಯೆ ಎಷ್ಟು (ಅವುಗಳ ವಿಂಗಡನೆಯ ವಿವರ ನೀಡುವುದು)

ಆ) ಕೃಷಿಯ ಹುಟ್ಟುವಳಿ (ಉತ್ಪಾದನೆಗಳು) ಸುತ್ತಲಿನ ಪ್ರದೇಶ ರೈತರಿಂದ ಮಾರ್ಕೆಟ್‌ಗಳಿಗೆ ಬರುತ್ತಿರುವ ದೊಡ್ಡ ಮಾರ್ಕೆಟ್‌ಗಳು ಯಾವುವು (ಅವುಗಳಲ್ಲಿ ಬೆಳೆಗಳ ಪ್ರಕಾರ ಆದಾಯದ ವಿವರ ನೀಡುವುದು)